O.S.150/2013 DW-7

ದಿನಾಂಕಃ  24.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃವಾದಿ ಪರ ವಕೀಲರಿಂದಃ</u>**

ನಾನು ಶಿರಾದ ತಾಲ್ಲೂಕು ಆಫಿಸಿನಲ್ಲಿ ಅರ್ಜಿ ತುಂಬುವ ಹಾಗೂ ಇತರೆ ಕ್ಲರಿಕಲ್ ಕೆಲಸಗಳನ್ನು ಮಾಡುತ್ತೇನೆ. ಸುಮಾರು 1992 ರಿಂದ ಸದರಿ ಕೆಲಸವನ್ನು ಮಾಡುತಿದ್ದೇನೆ. ನಾನು ಪ್ರಮಾಣ ಪತ್ರದಲ್ಲಿ ಹೇಳಿರುವ ಸ್ವತ್ತನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಗೋವಿಂದರಾಜುರವರ ಬರೆದಿರುವ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ ಎಂದರೆ ಸರಿ. ಸದರಿ ಪತ್ರಕ್ಕೆ ನಾನು ಯಾರ ಬಲವಂತ ಇಲ್ಲದೆ ಸಹಿ ಹಾಕಿರುತ್ತೇನೆ. ದಿವ್ಯ ಶ್ರೀ ರವರ ಪರಿಚಯವಿದ್ದ ಕಾರಣ ನಾನು ಸ್ವಇಚ್ಛೇಯಿಂದ ಸಹಿ ಹಾಕಿರುತ್ತೇನೆ. ಸಹಿ ಹಾಕುವ ಮುನ್ನ ನಾನು ಖಾತಾ extract, ಆಧಾರ್ ಕಾರ್ಡ್ ಹಾಗೂ ಇತರೆ ದಾಖಲಾತಿಗಳನ್ನು ನೋಡಿ ಹಾಕಿರುತ್ತೆನೆ. ಗೋವಿಂದರಾಜುರವರು ದಾಖಲಾತಿಗಳ ಆದಾರದ ಮೇಲಿ ಪತ್ರವನ್ನು ತಯಾರು ಮಾಡಿರುತ್ತಾರೆ ಎಂದರೆ ಸರಿ. ನಾನು ಸದರಿ ಪತ್ರದ ಆದಾರದ ಮೇಲೆ ಚಕ್ಕುಬಂದಿಯನ್ನು ಬರೆಸಿದ್ದೇನೆ ಎಂದರೆ ಸರಿ. ದಾನ ಪತ್ರವನ್ನು ಯಾವ ದಿನದಂದು ಬರೆದರು ಎಂದು ನನಗೆ ಗೊತ್ತಿಲ್ಲ. ನನಗೆ ನಾನು ಸಹಿ ಮಾಡಿರುವ ಸಂಗತಿ ಬಿಟ್ಟರೆ ಬೇರೆ ಯಾವ ವಿಚಾರ ಗೊತ್ತಿಲ್ಲ ಎಂದರೆ ಸರಿ. ದಿವ್ಯ ಶ್ರೀ ರವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಲಕ್ಷ್ಮಮ್ಮರವರು ದಿವ್ಯ ಶ್ರೀ ರವರಿಗೆ ದಾನ ಪತ್ರವನ್ನು ಬರೆದುಕೊಟ್ಟರು ಎಂದು ನುಡಿದಿರುತ್ತಾರೆ.  ಲಕ್ಷ್ಮಮ್ಮರವರಿಗೆ ದಾವಾ ಸ್ವತ್ತು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನನಗೆ ಯಾರ ನಡುವೆ ದಾವೆ ಇದೆ ಎಂಬುದು ಗೊತ್ತಿಲ್ಲ. ನನ್ನನ್ನು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಯಾರೂ ಕರೆತಂದಿಲ್ಲ. ನಾನು ವ್ಯವಹಾರದ ಸಂಬಂಧವಾಗಿ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿರುತ್ತೇನೆ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.